# ಕರಾವಳಿ ಅಲೆ ಸಂಪಾದಕರ ಬಂಧನ
# ಕಾಡದೇ ಹೋಗಿರುವ ಸಂಗತಿಗಳು

ರಾಜ್ಯದ ಕರಾವಳಿ ಪ್ರದೇಶದ ಅತ್ಯಧಿಕ ಪ್ರಸಾರದ ದೈನಿಕ 'ಕರಾವಳಿ ಅಲೆ' ಸಂಪಾದಕ ಬಿ.ವಿ. ಸೀತಾರಾಂರನ್ನು ಸರ್ಕಾರ ಬಂಧಿಸಿರುವುದರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ. ಹಾಗೆ ನೋಡಿದಾಗ ಸೀತಾರಾಂ ಹಾಗೂ ರೋಹಿಣಿಯವರನ್ನು ಈ ಹಿಂದಿನ ಜೆ.ಡಿ.ಎಸ್. ಬಿ.ಜೆ.ಪಿ. ಸಂಮಿಶ್ರ ಸರ್ಕಾರದ ಕಾಲದಲ್ಲೂ ಜೈನಮುನಿ ತರುಣ್ ಸಾಗರ್ ಬಗ್ಗೆ ಬರೆದಿದ್ದನ್ನು ನೆಪಮಾಡಿ ಬಂಧಿಸಲಾಗಿತ್ತು. ಆಗಲೂ ಕೈಗೆ ಕೋಳ ತೊಡಿಸಲಾಗಿತ್ತು. ಆಗ ಈಗಿನ ಮಟ್ಟದಲ್ಲಿ ಪ್ರತಿಭಟನೆಗಳು ನಡೆದಿರಲಿಲ್ಲ. ಈ ಬಾರಿ ಕೋಳ ಹಾಕಿ ನ್ಯಾಯಾಲಯಕ್ಕೂ ಹಾಜರುಪಡಿಸಿದರು. ರಾಜ್ಯಾದ್ಯಂತ ಪ್ರತಿಭಟನೆ ನಡೆದ ಮೇಲೆ ಬಡಪಾಯಿ ಪೇದೆಗಳನ್ನು ಮಾತ್ರ ಅಮಾನತ್ತು ಮಾಡಿ ಬಲಿಪಶುಗಳನ್ನಾಗಿ ಮಾಡಲಾಗಿವೆ. ಆದೇಶ ನೀಡಿದ ಒತ್ತಡ ಹಾಕಿದ ಅಧಿಕಾರಿಗಳನ್ನು ಹಾಗೂ ಹಿಂದಿರುವ ಸ್ಥಾಪಿತ ಹಿತಾಸಕ್ತಿಯ ಕೈಗಳನ್ನು ರಕ್ಷಿಸಲಾಗುತ್ತಿದೆ.

ಕರಾವಳಿ ಅಲೆ ಪತ್ರಿಕೆ ಕೋಮುವಾದ ಹಾಗೂ ಮೂಲಭೂತವಾದಗಳ ವಿರುದ್ಧವಾಗಿದೆ. ಕರಾವಳಿಯ ಬಹುತೇಕ ಪತ್ರಿಕೆಗಳು ಕೋಮುವಾದ ಹಾಗೂ ಅಪರಾಧಗಳನ್ನು ವೈಭವೀಕರಿಸುತ್ತಾ ಪತ್ರಿಕಾ ಧರ್ಮವನ್ನು ಗಾಳಿಗೆ ತೂರಿರುವಾಗ ಅಲೆ ಮಾತ್ರ ಜನಪರ ವಿಶ್ಲೇಷಣೆ ಮಾಡುತ್ತಿದೆ. ಬಿ.ವಿ. ಸೀತಾರಾಂರ ನಿಷ್ಠುರ ನಿಲುವು, ಸುದ್ಧಿಗಳನ್ನು ಒಮ್ಮೆ ಮಾತ್ರ ಸುದ್ಧಿಗಾಗಿ ಮಾತ್ರ ಮಾಡಿ ನಂತರ ಅದರ ಉಸಾಬರಿಗೆ ಹೋಗದೆ ಇರುವ ಪತ್ರಕರ್ತರೆನಿಸಿಕೊಂಡವರ ಸಾಮಾನ್ಯ ಪರಿಪಾಟಗಳಿಗೆ ಬದಲಾಗಿ ಸುದ್ಧಿಗಳನ್ನು ಬೆನ್ನತ್ತುವ ಅಪರೂಪದ ಶೈಲಿಗಳಿಂದಾಗಿ ಕರಾವಳಿಯ ಕೋಮುವಾದಿ ನಾಯಕರಿಗೆ ಹಾಗೂ ಇತರ ಪಟ್ಟಭದ್ರರಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಆಳುವ ಬಿ.ಜೆ.ಪಿ. ಸರ್ಕಾರಕ್ಕೂ ಸಹ್ಯವಾಗದೆ ಮಾನನಷ್ಟ ಮೊಕದ್ದಮೆಗಳ ನೆಪ ಬಳಸಿ ಸಂಪಾದಕರನ್ನು ತನ್ನ ಹದ್ದುಬಸ್ತಿನಲ್ಲಿಡಲು ಪ್ರಯತ್ನ ನಡೆಸುತ್ತಿದೆ. ಅಲೆ ಪತ್ರಿಕೆಯನ್ನು ಮುಗಿಸಿ ಬಿಡಲು ಭಜರಂಗದಳ ವಿಶ್ವ ಹಿಂದೂ ಪರಿಷತ್ ನಂತಹ ಹಿಂದೂ ಸಂಘಟನೆಗಳು ನಿರಂತರ ಪ್ರಯತ್ನ ನಡೆಸುತ್ತಿವೆ. ಹಲವಾರು ಬಾರಿ ಪತ್ರಿಕಾ ಕಾರ್ಯಾಲಯದ ಮೇಲೆ ದಾಳಿ ಮಾಡುತ್ತಾ ಬರಲಾಗಿದೆ. ನಷ್ಟಗಳನ್ನು ಉಂಟು ಮಾಡಿದ್ದಾರೆ. ಈಗ 'ಅಲೆ' ಮಾರಾಟದ ಏಜೆಂಟರನ್ನು ಬೆದರಿಸಿ ಮಾರಾಟ ಹಾಗೂ ಪ್ರಸಾರಕ್ಕೆ ತಡೆಯನ್ನುಂಟು  ಮಾಡುತ್ತಿದ್ದಾರೆ. ಆಶ್ಚರ್ಯವೆಂದರೆ ಪ್ರಜಾಪ್ರಭುತ್ವ ಎಂದು

ಕರೆದುಕೊಂಡಿರುವ ವ್ಯವಸ್ಥೆಯಲ್ಲಿ ಇವೆಲ್ಲಾ ರಾಜಾರೋಷವಾಗಿ ಸಲೀಸಾಗಿ ನಡೆಯುತ್ತಿರುವುದು. ಒಟ್ಟಿನಲ್ಲಿ ಪತ್ರಿಕೆಯನ್ನು ಮುಗಿಸಿಬಿಡುವ ಪ್ರಯತ್ನ ಇದು.

ವ್ಯವಸ್ಥೆಯ ದುರಂತವೆಂದರೆ ತಮ್ಮ ಪತ್ರಿಕಾಲಯದ ಮೇಲೆ ನಡೆಸಿರುವ ದಾಳಿಗಳ ವಿರುದ್ಧ ಸೀತಾರಾಂ ಸಾಕಷ್ಟು ಬಾರಿ ದೂರುಗಳನ್ನು ನೀಡಿದ್ದರೂ, ರಕ್ಷಣೆ ಕೋರಿ ರಾಜ್ಯದ ಉನ್ನತ ಮಟ್ಟದಲ್ಲಿ ಪತ್ರ ಬರೆದರೂ ಸರ್ಕಾರ ಮತ್ತು ಪೋಲಿಸ್ ಇಲಾಖೆ ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆನಿಸಿಕೊಂಡಿರುವ ಪತ್ರಿಕಾ ರಂಗದ ರಕ್ಷಣೆಗಾಗಿ ಏನೂ ಮಾಡದೆ ಹೋಗಿರುವುದು. ಪತ್ರಿಕಾರಂಗದಲ್ಲಿ ಕೆಲಸ ಮಾಡುತ್ತಿರುವವರು ಕೂಡ ಈ ರೀತಿಯ ಮೂಗು ಬಾಯಿ ಒತ್ತಿ ಹಿಡಿಯುವ, ಕೈಕಾಲು ಕಟ್ಟಿ ಮಣಿಸುವ ಸ್ಥಾಪಿತ ಹಿತಾಸಕ್ತಿಗಳ ಹುನ್ನಾರಗಳನ್ನು ಅರ್ಥ ಮಾಡಿಕೊಂಡು ಬಲವಾಗಿ ಪ್ರತಿಭಟಿಸದೆ ಕೇವಲ ಕೈಗೆ ಕೋಳ ಹಾಕಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದನ್ನು ಮಾತ್ರ ಒತ್ತು ನೀಡಿ ವಿರೋಧಿಸುತ್ತಿರುವುದು ಸರಿಯಾದುದಲ್ಲ.

ಅಲೆ ಪತ್ರಿಕೆ ಮೇಲಿನ ದಾಳಿ ಸಂಪಾದಕರ ಬಂಧನ ಕೈಕೋಳ ತೊಡಿಸುವಿಕೆಗಳಲ್ಲಿ ಪತ್ರಿಕಾ ಸ್ವಾತಂತ್ರ್ಯದ ಹರಣ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ, ಸಂವಿಧಾನದತ್ತ ಹಕ್ಕುಗಳ ನಿರಾಕರಣೆ, ಕಾನೂನುಗಳ ದುರ್ಬಳಕೆ, ಪ್ರಜಾಪ್ರಭುತ್ವ ಮೌಲ್ಯಗಳ ಉಲ್ಲಂಘನೆಯಂತಹ ಗಂಭೀರ ಪ್ರಶ್ನೆಗಳು ಅಡಗಿವೆ. ಈ ಹಿನ್ನೆಲೆಯಲ್ಲಿ ಬಿ.ವಿ. ಸೀತಾರಾಂ ಬಂಧನ, ಅಲೆ ಪತ್ರಿಕಾಲಯದ ಮೇಲಿನ ದಾಳಿ ಹಾಗೂ ಬೆದರಿಕೆಯ ಘಟನೆಗಳನ್ನು ನೋಡಿ ಪ್ರತಿಭಟಿಸಬೇಕಾದ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.

– ಭರತ್ ರಾಜ್

**kumar.bharath047@gmail.com**